ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1107(1547)**
ಮಾನ್ಯ ಸದಸ್ಯರ ಹೆಸರು	**ಶ್ರೀ ಗಡ್ಡದೇವರಮರ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ)**
ಉತ್ತರಿಸುವ ಸಚಿವರು	**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಲಕ್ಷ್ಮೇಶ್ವರ–ಹುಬ್ಬಳ್ಳಿ ರಸ್ತೆ ತುಂಬಾ ಹದಗೆಟ್ಟಿ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಆ) ಬಂದಿದ್ದಲ್ಲಿ, ಈ ರಸ್ತೆ ಸುಧಾರಣೆಗಾಗಿ ಸರ್ಕಾರ ಕ್ರಮ ಕೈಗೊಳ್ಳುವುದೇ,

ಈ ರಸ್ತೆಯನ್ನು ಈಗಾಗಲೇ ರಾಜ್ಯ ಹೆದ್ದಾರಿಯ ಮೂರು ವರ್ಷದ ನಿರ್ವಹಣೆಯ ಯೋಜನೆಯ ಗದಗ ಮತ್ತು ಧಾರವಾಡ ವಿಭಾಗದಲ್ಲಿ ಒಟ್ಟು 37 ಕಿಮೀ ರಸ್ತೆಯನ್ನು ನಿರ್ವಹಣೆಗಾಗಿ ತೆಗೆದುಕೊಳ್ಳಲಾಗಿದೆ ಮತ್ತು ನಿರ್ವಹಣೆಯ ಕಾಮಗಾರಿಗಳು ಪ್ರಗತಿಯಲ್ಲಿವೆ

ಇ) ಹಾಗಿದ್ದಲ್ಲಿ, ಈ ರಸ್ತೆ ಸುಧಾರಣೆಗಾಗಿ ಈವರೆಗೇನಾದರೂ ಅನುದಾನ ಬಿಡುಗಡೆ ಮಾಡಲಾಗಿದೆಯೇ,

ರಾಜ್ಯ ಹೆದ್ದಾರಿಯ ನಿರ್ವಹಣೆಯ ಯೋಜನೆಗೆ ರೂ 115 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ

ಈ) ಇಲ್ಲದಿದ್ದಲ್ಲಿ, ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1108(1548)**
ಸದಸ್ಯರ ಹೆಸರು	**ಶ್ರೀ ಗಡ್ಡದೇವರಮರ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ)**
ಉತ್ತರಿಸುವ ಸಚಿವರು	**ಶ್ರೀ ಹೆಚ್ ಡಿ ಕುಮಾರ್‌ಸ್ವಾಮಿ (ಮುಖ್ಯಮಂತ್ರಿಗಳು)**

ಅ) ಗದಗ ಜಿಲ್ಲೆ ಲಕ್ಷ್ಮೇಶ್ವರ ನಗರವು ಸುಮಾರು 40ಸಾವಿರ ಜನಸಂಖ್ಯೆಯನ್ನು ಹೊಂದಿದ್ದರೂ ಸಹ ಈ ಪಟ್ಟಣದಲ್ಲಿ ಒಳಚರಂಡಿ ಯೋಜನೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ